Construteion of National Highway No. 13

1159. SRI YADAVA RAO C. (Gangavathi).—Will the Minister for Public Works be pleased to state :—

(a) the year in which the construction work of No. 13 National Highway has been commenced after accordi g approv l ; the amount spent so far ;

(b) the year in which this road was decided to be released for Vehicular traffic and for use by the general public ; the reason for the delay ;

(c) the new places through which the State Government have chalked out and requested the Central Government for construction of National Highway ?

SRI KAGODU THIMMAPPA (Minister for Public Works) —

(a) The Central Government have declared the Chitradurga Sholapur road as National Highway during May, 1960

The National Highway is numbered as 13. The construction work of this road had commenced during the same year to bring it to the level of National Highway. A sum of Rs. 1,401 lakhs has been spent (upto March 1982) for this purpose so far.

(b) It was not decided as to the year in which this road was about to be released for Vehicular traffic and for use by the Public Consequent on declaring this road as National Highway, in order to bring this road to the status of National Highway, in addition to the construction of many bridges, many geometric improvement works had to be made. Because of these reasons, the delay is caused for releasing this road for traffic.

(c) The State Government has requested the Central Government for conversion of the State Highways as National Highways, as indicated in the annexure which is laid on the Table of the House.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ, ರಾಷ್ಟ್ರೀಯ ಹೆದ್ದಾರಿ ೧೩ ಇದನ್ನು ರಾಷ್ಟ್ರೀಯ ಹೆದ್ದಾರಿ ಮಟ್ಟಕ್ಕೆ ತರಲು ನಿರ್ಮಾಣ ಕೆಲಸಗಳನ್ನು ಪ್ರಾರಂಭಿಸಲಾಯಿತು, ಆದರೆ ವಾಹನಗಳ ಮತ್ತು ಜನತೆಯ ಸಂಚಾರಕ್ಕೆ ಇಂತಹ ವರ್ಷವೇ ಬಿಡುಗಡೆ ಮಾಡುತ್ತೇವೆ ಎಂದು ನಿರ್ಧರಿಸಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಯಾವ ವರ್ಷದಲ್ಲಿ ಪ್ರಾರಂಭ ಮಾಡಿ ಯಾವ ವರ್ಷದಲ್ಲಿ ಮುಕ್ತಾಯ ಮಾಡುತ್ತೀರಿ. ಈ ರೀತಿ ತಡ ಮಾಡುವುದಕ್ಕೆ ಕಾರಣ ವೇನು ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಆ ರೀತಿ ಏನೂ ಇಲ್ಲ. ಈ ರಾಷ್ಟ್ರೀಯ ಹೆದ್ದಾರಿ ೧೩ನ್ನು ಅಭಿವೃದ್ಧಿ ಮಾಡುವಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ಆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರತಕ್ಕಂತಹ ಮೋರಿಗಳು, ಮತ್ತು ಸೇತುವೆಗಳು ಜಾಸ್ತಿ ಇರುವುದರಿಂದ ಆ ಕೆಲಸ ಬೇಗ ಮುಗಿಯುಬೇಕು. ಆದರೆ ಇತ್ತೀಚೆಗೆ ಪರಿಶೀಲನೆ ಮಾಡಿದಾಗ ಆ ಒಂದು ಕೆಲಸವನ್ನು ಆಗಸ್ಟ್

ತಿಂಗಳಿನಲ್ಲಿ ಪೂರ್ತಿ ಮಾಡಿ ತಾತ್ಕಾಲಿಕವಾಗಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಯೋಚನೆ ಮಾಡಿದ್ದೇವೆ.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೆ ಈ ಕೆಲಸವನ್ನು ಪ್ರಾರಂಭಿಸಲಾಗಿ ಸುಮಾರು ೨೨ ವರ್ಷಗಳು ಆಗಿದೆ. ಮತ್ತು ಕೇಂದ್ರ ಸರ್ಕಾರದಲ್ಲಿ ಈ ಒಂದು ಇಲಾಖೆಯ ಸಚಿವರು ನಮ್ಮ ರಾಜ್ಯದವರೇ ಆಗಿದ್ದಾರೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಲಿಲ್ಲವೇ ? ಮತ್ತೇ ಅವರ ಜೊತೆ ಸಮಾಲೋಚನೆ ಮಾಡಿ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ಜಾಸ್ತಿಯಾಗಿ ಕೊಟ್ಟಿದ್ದಾರೆ. ಇನ್ನು ಹೆಚ್ಚಿಗೆ ಕೊಡುವಂತಹ ನಿರೀಕ್ಷೆ ಕೂಡ ರಾಜ್ಯ ಸರ್ಕಾರಕ್ಕೆ ಇದೆ. ಈ ಒಂದು ರಾಷ್ಟ್ರೀಯ ಹೆದ್ದಾರಿಗೆ ಸುಮಾರಿಗೆ ೧೪೦೧ ಲಕ್ಷ ರೂಪಾಯಿಗಳು ಖರ್ಚಾಗಿದೆ. ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರತಕ್ಕಂತಹ ಸೇತುವೆಗಳು ಮತ್ತು ಮೋರಿಗಳು ನೋಡಿಕೊಂಡು ಹಣವನ್ನು ಒದಗಿಸಿ ಕೊಡಬೇಕು. ಇಲ್ಲಿ ಸುಮಾರು ಸೇತುವೆಗಳು ಮತ್ತು ಮೋರಿಗಳು ಬರುತ್ತವೆ ಅವು ಯಾವುವೆಂದರೆ, Thungabhadra River near Hospet, Don bridge, Krishna bridge, Malaprabha bridge, Honnagula halla bridge, Kadaginala bridge ಗಳು ಬರುತ್ತವೆ. ಆದ್ದರಿಂದ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ.

ಶ್ರೀ ಬಿ. ಬಿ. ಪಾಟೀಲ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದರು ಈ ರಾಷ್ಟ್ರೀಯ ಹೆದ್ದಾರಿ ೧೩ ಇದನ್ನು ಆಗಸ್ಟ್ ತಿಂಗಳಿನಲ್ಲಿ ವಾಹನಗಳ ಸಂಚಾರಕ್ಕೆ ತಾತ್ಕಾಲಿಕವಾಗಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಮತ್ತೇ ಇನ್ನೂ ಅನೇಕ ಕಡೆಗಳಲ್ಲಿ ಸೇತುವೆಗಳು ಮತ್ತು ಮೋರಿಗಳನ್ನು ಕಟ್ಟಬೇಕಾಗಿದೆ. ಆದರೆ ಒಂದು ತಿಂಗಳಲ್ಲಿ ವಾಹನಗಳ ಸಂಚಾರಕ್ಕೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ, ಇದು ಸಾಧ್ಯವೇ ? ಆದ್ದರಿಂದ ಮಾನ್ಯ ಮಂತ್ರಿಗಳು ೧–೨ ವರ್ಷಗಳಲ್ಲಿ ಪೂರ್ತಿ ಮಾಡಿ ವಾಹನಗಳ ಸಂಚಾರಕ್ಕೆ ಬಿಡುಗಡೆ ಮಾಡುತ್ತೇವೆಂದು ಖಚಿತವಾಗಿ ತಿಳಿಸಬೇಕು ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ನಾವು ಬಿಜಾಪುರದಿಂದ ಬೈ ಪಾಸ್ ತೆಗೆದು ಕೊಂಡು ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಬಿ. ಬಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈ ಪಾಸ್ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಕಾರಣವೇನೆಂದರೆ ಇದು ಮೈನ್ ರೋಡ್.

SRI K. BHASKAR NAIDU.—In the reply, the Hon'ble Minister has stated that they have spent Rs 1,401 lakhs so far. Was it not estimated previously that so many bridges will have to be constructed and the estimated amount required for the construction of each bridge ? Since the amount required will be heavy, it will take 20 years to complete this. Is it because the National Highway is numbered as 13 which is an unlucky number, that this has been delayed ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ರಾಷ್ಟ್ರೀಯ ಹೆದ್ದಾರಿಗಳನ್ನು ಪರಿವರ್ತನೆ ಮಾಡುವಂತಹ ಕಾಲದಲ್ಲಿ ಪರಿವರ್ತನೆ ಮಾಡಬೇಕಾದರೆ ಇಷ್ಟೇ ಹಣ ಖರ್ಚು ಮಾಡಬೇಕು ಎಂದು ನಿರ್ಧಾರ ಮಾಡುವುದಕ್ಕಾಗುವುದಿಲ್ಲ. ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಆಗದೆ ಇದ್ದರೆ ಅದನ್ನು ಪರಿಗಣಿಸಿ ಪರಿವರ್ತನೆ ಮಾಡಿದ್ದಾರೆ. ಈ ರಾಷ್ಟ್ರೀಯ ಹೆದ್ದಾರಿಯನ್ನು ಪರಿವರ್ತನೆ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆಯೋ ಅದನ್ನು ಆಯವ್ಯಯದಲ್ಲಿ ಕೊಡುತ್ತಾರೆ. ಅದರಂತೆ ಅಭಿವೃದ್ಧಿ ಮಾಡಬೇಕಾಗುತ್ತದೆ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಮಂತ್ರಿಗಳು ಈ ೧೩ನೇ ರಾಷ್ಟ್ರೀಯ ಹೆದ್ದಾರಿಗೆ ಹಣವನ್ನು ಒದಗಿಸಿಕೊಡದಿದ್ದರೆ ಆ ಭಾಗದ ಜನರಿಗೆ ಅವರ ಮೇಲೆ ಅವಿಶ್ವಾಸ

ಬರುತ್ತದೆ. ಮತ್ತು ಮಂತ್ರಿಗಳ ಕ್ಷೇತ್ರಕ್ಕೆ ಮಾತ್ರ ಹೆಚ್ಚು ಹಣವನ್ನು ಒದಗಿಸಿಕೊಳ್ಳುತ್ತಿದ್ದಾರೆ ಮತ್ತು ಆ ಕಡೆಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಿ ಅನುಕೂಲ ಮಾಡಿಕೊಳ್ಳುತ್ತಿದ್ದಾರೆಂದು ಜನರು ಅಲ್ಲಲ್ಲಿ ಅಂದುಕೊಂಡಿದ್ದಾರೆ. ಮತ್ತು ಘಟಪ್ರಭಾ ಮತ್ತು ಮಾರಾಗಿ ಮಲಪ್ರಭಾ ಈ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದಾರೆ ಅದೇ ರೀತಿಯಲ್ಲಿ ಈ ಬಿಜಾಪುರಕ್ಕೂ ಹಣವನ್ನು ಖರ್ಚು ಮಾಡಿ ಅಭಿವೃದ್ಧಿ ಮಾಡಿದರೆ ಅವರ ಕಲ್ಯಾಣವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಮಾತನಾಡಿದ್ದು ನಗುವುದಕ್ಕೆ ಬಹಳ ಚೆನ್ನಾಗಿದ್ದರೂ ಸಹ ಅದರ ಹಿನ್ನೆಲೆಯಲ್ಲಿ ನೋಡಿದರೆ ಬಹಳ ಅರ್ಥಗರ್ಭಿತವಾಗಿದೆ. ಹಿಂದೆ ಶ್ರೀ ವೀರೇಂದ್ರಪಾಟೀಲ್‌ರವರು ಮಂತ್ರಿಗಳಾಗಿದ್ದಾಗ ಆ ಭಾಗಕ್ಕೆ ಹೆಚ್ಚು ಹಣವನ್ನು ಒದಗಿಸಿಕೊಂಡು ಅಭಿವೃದ್ಧಿ ಮಾಡಿಕೊಂಡಿದ್ದಾರೆಂದು ಹೇಳುತ್ತಿದ್ದರು. ಆದರೆ ಆ ಮಾತನ್ನು ನಾನು ನಂಬಿರಲಿಲ್ಲ. ಅದೇ ರೀತಿಯಲ್ಲಿ ತಾವು ನಂಬುವುದು ಬೇಡ. ನಮ್ಮ ಸರ್ಕಾರದವರು ಗುಲ್ಬರ್ಗ ಮತ್ತು ಬಿಜಾಪುರದಲ್ಲಿ ಮಂತ್ರಿಮಂಡಲದ ಸಭೆಯಲ್ಲಿ ಈ ಭಾಗದ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕಾಗಿ ಆಯವ್ಯಯದಲ್ಲಿ ಹೆಚ್ಚು ಹಣವನ್ನು ಒದಗಿಸಿಕೊಟ್ಟು ಹಣವನ್ನು ಖರ್ಚು ಮಾಡಿದ್ದೇವೆ. ನಾರಾಯಣಪುರದ ಡ್ಯಾಮ್‌ನಲ್ಲಿ ಬಸವ ದೇವಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೆ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾವು ಯಾವ ವ್ಯತ್ಯಾಸವನ್ನು ಸಹ ಮಾಡಿಲ್ಲ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ನೀವು ಸಬ್ ಕಮಿಟಿ ಮಾಡಿಬಿಟ್ಟಿದ್ದೀರಿ. ನಮಗೆ ಇದು ಸುಡುವ ತುಪ್ಪ ಆಗಿದೆ. ದಯವಿಟ್ಟು ಬಾಗಲಕೋಟೆ ವಿಷಯವನ್ನು ಬೇಗ ಬಗೆಹರಿಸಿಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಅವರು ಹೇಳಿರತಕ್ಕಂತಾದ್ದು ಬಹಳ ಪ್ರಮುಖವಾದ ವಿಷಯ. ಇದನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾದ್ದರಿಂದ ಮಂತ್ರಿ ಮಂಡಲ ಸಬ್ ಕಮಿಟಿ ಮಾಡಿ ಚರ್ಚೆ ಮಾಡುತ್ತದೆ. ಇದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವಾಗ ಶಾಶ್ವತವಾದ ಸೌಲಭ್ಯಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ಸಂಬಂಧಪಟ್ಟ ವಿವರಗಳನ್ನು ತರಿಸಿ ಆಲೋಚನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಪರಪ್ಪ ಕೆ. ಕಳ್ಳಿಗುಡ್ಡ.—ಆಲ್ಲಿ ಹೊಳೆ ಬಂದು ಬಸವಕಲ್ಯಾಣದ ದೇವಸ್ಥಾನ ಮುಳುಗಲಿಕ್ಕೆ ಬರುತ್ತಿದೆ. ಈ ಕೆಲಸವನ್ನು ಬೇಗ ತೆಗೆದುಕೊಳ್ಳಿ. ಜನ ನನ್ನನ್ನು ಕೇಳುತ್ತಾರೆ. ನನಗೆ ಇದು ಧರ್ಮ ಸಂಕಟಕ್ಕೆ ಬಂದಿದೆ.

(ಉತ್ತರ ಇಲ್ಲ)

ಶ್ರೀ ಎಸ್. ಎಸ್. ಆರಕೇರಿ.—ಪುಂಡರಾಪುರದಿಂದ ಗುಲ್ಬರ್ಗಾವರೆಗೆ ಇರುವ ಸ್ಟೇಟ್ ಹೈವೇ ಏನಿದೆ ಅದು ನ್ಯಾಷನಲ್ ಹೈವೇ ಆಗುವ ಎಲ್ಲಾ ಲಕ್ಷಣಗಳನ್ನೂ ಹೊಂದಿದ್ದು ಮಾನ್ಯ ಸಚಿವರು ಇದನ್ನು ಕೂಡಲೇ ಮಂಜೂರು ಮಾಡುವರೇ ಹೇಗೆ? ಇದರ ಬಗ್ಗೆ ಸರ್ವೆ ಮಾಡಿಸಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ರಾಷ್ಟ್ರೀಯ ಹೆದ್ದಾರಿ ಮಂಜೂರು ಮಾಡುವ ಅವಕಾಶ ನಮಗೆ ಇಲ್ಲ. ಅದನ್ನು ಕೇಂದ್ರ ಸರ್ಕಾರದವರು ಮಾಡಬೇಕು.

ಶ್ರೀ ಎಸ್. ಬಸವಯ್ಯ.—ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡಬೇಕೆಂದು ಸೂಚನೆ ಕಳಿಸುವುದರಲ್ಲಿ ಹಮ್ಮಾಬಾದ್, ಬಳ್ಳಾರಿ, ಚಿಕ್ಕನಾಯಕನಹಳ್ಳಿ, ಹೆಸರಘಟ್ಟ, ಕೊಯಮತ್ತೂರು, ಊಟಿ ಶ್ರೀರಂಗಪಟ್ಟಣ ಈ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡಲು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಈಗಾಗಲೇ ಬಸವಯ್ಯನವರು ಹೇಳಿದ ರಸ್ತೆಯನ್ನೂ ಸೇರಿಸಿ ಒಟ್ಟು ೧೧ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ಕೇಳಿದ್ದೇವೆ. ಆದರೆ ಕೇಂದ್ರ ಸರ್ಕಾರದವರು ಯಾವುದಾದರೂ ಕಡಿಮೆ ಮಾಡಿದರೂ ಮಾಡಬಹುದೆಂದು ಹೇಳಿದ್ದಾರೆ. ಆದರ ಮೇಲೆ ಪುನ: ಹಿಂದಿನದ್ದನ್ನು ಪರಿಷ್ಕಾರ ಮಾಡಿ ನಾಲ್ಕೈ ರಸ್ತೆಗಳನ್ನು ಸೂಚಿಸಿದೆವು. ಆದರಲ್ಲಿ ಶ್ರೀ ಬಸವಯ್ಯನವರು ಕೇಳಿದ ರಸ್ತೆ ಕೂಡ ಇದೆ. ಮೊನ್ನೆ ನೀರಾವರಿ ಮಂತ್ರಿಗಳ ಸಮ್ಮೇಳನ ನಡೆದಾಗ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. ಅವರು ಕೆಲವು

ಕೈಟೇರಿಯಾ ಕೂಡ ಹೇಳಿದ್ದಾರೆ. ನ್ಯಾಷನಲ್ ರೋಡ್ ಡೆವಲೆಪ್‌ಮೆಂಟ್ ಕೌನ್ಸಿಲ್‌ನವರು ಬಂದು ಸರ್ವೆ ಮಾಡಿದ್ದಾರೆ. ಅವರು ಮಾಡಿದ್ದನ್ನು ಆಧಾರವಾಗಿಟ್ಟುಕೊಂಡು ಸೂಚನೆ ಮಾಡುವ ಕಾಲದಲ್ಲಿ ಏನು ಹೇಳಿದ್ದಾರೆ ಅದನ್ನೆಲ್ಲಾ ಸಲಹೆಕೊಟ್ಟು ಆದಷ್ಟು ಶೀಘ್ರವಾಗಿ ಮಾಡುವ ರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಲಾಗುವುದು.

Construction at Bridge at Kuppuru Village, Chicknayakanahalli

1221 SRI. N. BASAVAIAH (Chiknayakanahalli).—Will the Minister for Public Works be pleased to state.

(a) the reason for not commenciug the bridge work which was sanctioned near Kuppuru Village Shettykere Hobli in Chikanayakanahalli taluk ;

(b) whether this work would be taken up immediately as it is difficult for movement of buses. people and cattle due to overflow of water in the culvert during rainy season ?

SRI KAGODU THIMMAPPA(Minister for Public Works).—

(a) This work has already been commenced and a sum about Rs. 1.04 lakhs has been spent.

(b) Yes, This work will be completed as early as possible.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಉತ್ತರದಲ್ಲಿ ಕೆಲಸ ಪ್ರಾರಂಭವಾಗಿದೆ ಮತ್ತು ೧.೦೪ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ಕೆಲಸಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ೨೫–೧–೮೦ರಲ್ಲಿ ಒಂದು ಟೆಂಡರ್ ಮುಖಾಂತರ ಆ ಕೆಲಸವನ್ನು ಕೊಟ್ಟಿದ್ದೆವು. ೨೫–೫–೮೧ರಲ್ಲಿ ಅದು ಪೂರ್ಣ ಆಗಬೇಕಾಗಿತ್ತು. ಸಿಮೆಂಟಿನ ತೊಂದರೆಯಿಂದಾಗಿ ಸ್ವಲ್ಪ ತಡವಾಗಿದೆ.

ಶ್ರೀ ಎನ್. ಬಸವಯ್ಯ.—೧.೦೪ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಅಲ್ಲಿ ೫ ಲೋಡ್ ಜೆಲ್ಲಿ ತಂದು ಹಾಕಿರುವುದನ್ನು ಬಿಟ್ಟರೆ ಬೇರೆ ಯಾವ ಕೆಲಸವೂ ಆಗಿಲ್ಲ. ಹಳ್ಳ ಮುಂಚ್ಜಿ ಫೌಂಡೇಷನ್ ಕೂಡ ಆಗಿಲ್ಲ. ಈ ೧.೦೪ ಲಕ್ಷ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಿದ್ದಾರೆಯೋ ಹೇಗೆ ಎಂಬುದನ್ನು ತಾವು ಇನ್‌ಸ್ಪೆಕ್ಷನ್ ಮಾಡಿ ಅಲ್ಲಿ ಹಣ ದುರುಪಯೋಗವಾಗಿದ್ದರೆ ಅದನ್ನು ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವಿರಾ ? ಇಷ್ಟು ಹಣ ಖರ್ಚು ಮಾಡಿದ್ದೇವೆ ಎಂದು ಅಧಿಕಾರಿಗಳು ಸತ್ಯಕ್ಕೆ ದೂರವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಲಕ್ಷ ರೂಪಾಯಿ ಎಲ್ಲಿ ಹೋಯಿತೆಂಬುದನ್ನು ವಿಚಾರ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಈ ೧.೦೪ ಲಕ್ಷ ರೂಪಾಯಿ ಯಾವ ಉದ್ದೇಶಕ್ಕಾಗಿ ಖರ್ಚು ಮಾಡಿದ್ದಾರೆ ಎನ್ನುವ ವಿವರಗಳು ಈಗ ನನ್ನಲ್ಲಿ ಇಲ್ಲ. ಕಬ್ಬಿಣ ಮತ್ತು ಸಿಮೆಂಟನ್ನು ಕೊಂಡು ಕೊಂಡಿರುತ್ತಾರೆ. ಜೊತೆಗೆ ಬೆಡ್ ಲೆವಲ್‌ವರೆಗೆ ಫೌಂಡೇಶನ್ ಹಾಕಿದ್ದಾರೆ. ಒಂದುವೇಳೆ ಅಲ್ಲಿ ಏನೂ ಕೆಲಸ ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳುವುದಾದರೆ ಖಂಡಿತವಾಗಿಯೂ ನಾನು ಪರ್ಸನಲ್ ಇನ್‌ಸ್ಪೆಕ್ಷನ್ ಮಾಡುತ್ತೇನೆ. ಅಥವಾ ಯಾರನ್ನಾದರೂ ಕಳುಹಿಸಿ ಇನ್‌ಸ್ಪೆಕ್ಷನ್ ಮಾಡಿಸುತ್ತೇನೆ.

ಶ್ರೀ ಎನ್. ಬಸವಯ್ಯ.—ಸಿಮೆಂಟ್ ಅಭಾವ ಇದೆಯೆಂದು ಹೇಳಿದ್ದೀರಿ. ಆದಷ್ಟು ಬೇಗ ಪ್ರಯಾಣಿಕರಿಗೆ ಅನುಕೂಲತೆ ಮಾಡಿಕೊಡುವ ದೃಷ್ಟಿಯಿಂದ ಈ ಕೆಲಸ ಮಾಡಿ ಮುಗಿಸಿ.

ಶ್ರೀ ಕಾಗೋಡು ತಿಮ್ಮಪ್ಪ.—ಕೆಲಸವೆನೂ ಆಗಿಲ್ಲವೆಂದರೆ ಇವತ್ತೇ ಯಾರನ್ನಾದರೂ ಅಲ್ಲಿ ಕಳಿಸಿ ವರದಿಯನ್ನು ತರಿಸಿ ನೋಡುತ್ತೇನೆ.